ಕನ್ನಡ ವಿಶ್ವವಿದ್ಯಾಲಯ, ಹಂಪಿ
**ಆಂತರಿಕ ಗುಣಮಟ್ಟ ಭರವಸೆ ಕೋಶ**
ವಿದ್ಯಾರಣ್ಯ 583 276, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ದೂರವಾಣಿ: 08394-241335

**ಕವಿಹಂ:ಐಕ್ಯುಎಸಿ:ಪಮಂಸ:03:2020-21** **ದಿನಾಂಕ: 20.06.2020**

# ಐಕ್ಯುಎಸಿ ಪದಾಧಿಕಾರಿಗಳ ಮಂಡಳಿ ಸಭೆಯ ನಡಾವಳಿಗಳು

ದಿನಾಂಕ: 19.06.2020ರಂದು ಕ್ರಿಯಾಶಕ್ತಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಐಕ್ಯುಎಸಿ ಪದಾಧಿಕಾರಿಗಳ ಮಂಡಳಿ ಸಭೆ(1)

**ಸಭೆಯಲ್ಲಿ ಹಾಜರಿದ್ದವರು**

| | | |
|---|---|---|
| 1. ಡಾ. ಸ.ಚಿ. ರಮೇಶ, ಮಾನ್ಯ ಕುಲಪತಿಗಳು, ಕವಿಹಂ. | : | ಅಧ್ಯಕ್ಷರು |
| 2. ಡಾ. ಎ.ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ. | : | ಸದಸ್ಯರು |
| 3. ಡಾ. ಎ.ವೆಂಕಟೇಶ, ಉಪಕುಲಸಚಿವರು, ಆಡಳಿತ | : | ಸದಸ್ಯರು |
| 4. ಶ್ರೀ ಬಿ. ಗುರುಬಸಪ್ಪ, ಸಹಾಯಕ ಕುಲಸಚಿವರು, ನಿರ್ವಹಣೆ | : | ಸದಸ್ಯರು |
| 5. ಡಾ. ಎ.ಮೋಹನ ಕುಂಟಾರ್, ನಿರ್ದೇಶಕರು, ಐಕ್ಯುಎಸಿ | : | ಸದಸ್ಯರು |
| 6. ಶ್ರೀಮತಿ ಡಿ. ಪ್ರಭಾ, ಸಹಾಯಕ ನಿರ್ದೇಶಕರು | : | ಸದಸ್ಯ ಸಂಚಾಲಕರು |

**ಆನ್‌ಲೈನ್ ಮೂಲಕ ಭಾಗವಹಿಸಿದವರು**

| | | |
|---|---|---|
| 1. ಡಾ. ರಹಮತ್ ತರೀಕೆರೆ, ಪ್ರಾಧ್ಯಾಪಕರು | : | ಸದಸ್ಯರು |
| 2. ಡಾ. ಟಿ.ಪಿ. ವಿಜಯ್, ಪ್ರಾಧ್ಯಾಪಕರು | : | ಸದಸ್ಯರು |
| 3. ಡಾ. ಬಸವರಾಜ, ಸಹಾಯಕ ಪ್ರಾಧ್ಯಾಪಕರು<br>ಸರ್ಕಾರಿ ಪ್ರ.ದ.ಕಾಲೇಜು, ಹೊಸಪೇಟೆ | : | ಸದಸ್ಯರು |
| 4. ಶ್ರೀ ರಾಘವೇಂದ್ರ ಕುಪ್ಪೆಲೂರು, ಸಂಶೋಧನಾ ವಿದ್ಯಾರ್ಥಿ | : | ಸದಸ್ಯರು |

ಐ.ಕ್ಯು.ಎ.ಸಿ. ನಿರ್ದೇಶಕರು ಸ್ವಾಗತಿಸಿ 2018-19ನೇ ಸಾಲಿನ ಎಕ್ಯುಎಆರ್ ನ್ಯಾಕ್‌ಗೆ ಸಲ್ಲಿಸಿದ ಬಗೆಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.

**ವಿಷಯ: 1. 2019-20ನೇ ಸಾಲಿನ ಮೌಲ್ಯಮಾಪನ ವರದಿಯ ನಮೂನೆಯ ಬಗೆಗೆ.**

**ನಿರ್ಣಯ:** 2019-20ನೇ ಸಾಲಿನ ಮೌಲ್ಯಮಾಪನ ವರದಿಯ ನಮೂನೆಯನ್ನು ಸಭೆಯು ಪರಿಶೀಲಿಸಿತು. ಸದಸ್ಯರೊಬ್ಬರ ಸೂಚನೆಯ ಹಿನ್ನೆಲೆಯಲ್ಲಿ ಅಧ್ಯಯನ ವಿಭಾಗಗಳ ಪ್ರಾಧ್ಯಾಪಕರ ಜೊತೆ ಸಮಾಲೋಚಿಸಿದ ಬಳಿಕ ಮೌಲ್ಯಮಾಪನ ವರದಿಯ ನಮೂನೆಯನ್ನು ಅಂತಿಮಗೊಳಿಸಲು ತೀರ್ಮಾನಿಸಲಾಯಿತು.

**ವಿಷಯ: 2. 2019-20ನೇ ಸಾಲಿನ ಎಕ್ಯುಎಆರ್ ಮಾಹಿತಿ ಸಂಗ್ರಹಿಸುವ ಬಗೆಗೆ.**

**ನಿರ್ಣಯ:** 2019-20ನೇ ಸಾಲಿನ ಎಕ್ಯುಎಆರ್ ಸಂಬಂಧಿಸಿದಂತೆ ಮಾಹಿತಿಗಳನ್ನು ಸಂಗ್ರಹಿಸಲು ನಮೂನೆಗಳನ್ನು ಅಂತಿಮಗೊಳಿಸಿದ ಬಳಿಕ ಸಂಬಂಧಿಸಿದ ವಿಭಾಗಗಳಿಗೆ ಕಳುಹಿಸಲು ನಿರ್ಣಯಿಸಲಾಯಿತು.

**ವಿಷಯ: 3. 2019-20ನೇ ಸಾಲಿನ ಅಧ್ಯಾಪಕರ, ವಿದ್ಯಾರ್ಥಿಗಳ ಹಾಗೂ ಹಳೆಯ ವಿದ್ಯಾರ್ಥಿಗಳ ಫೀಡ್‌ಬ್ಯಾಕ್ ಪಡೆಯುವ ಬಗೆಗೆ.**

**ನಿರ್ಣಯ:** ಮೇಲಿನ ಎಲ್ಲ ಫೀಡ್‌ಬ್ಯಾಕ್‌ಗಳನ್ನು ಪಡೆಯುವ ಪ್ರಕ್ರಿಯೆ ಆರಂಭಿಸಲು ಸಭೆ ಅನುಮೋದನೆ ನೀಡಿತು.

**ವಿಷಯ: 4. ಐಕ್ಯುಎಸಿ ಕಾರ್ಯಕ್ರಮಗಳ ಬಗೆಗೆ.**

**ನಿರ್ಣಯ:** 1. ಕೊವಿಡ್ ಅವೆರ್‌ನೆಸ್ ಪ್ರೋಗ್ರಾಂ

2. ಅಧ್ಯಾಪಕರಿಗೆ ಎಸ್.ಎಸ್.ಆರ್. ಕ್ರೈಟೀರಿಯಾವಾರು ಅವೆರ್‌ನೆಸ್ ಪ್ರೋಗ್ರಾಂ
3. ಆಡಳಿತ ಅಧಿಕಾರಿಗಳಿಗೆ ಎಸ್.ಎಸ್.ಆರ್. ಕ್ರೈಟೀರಿಯಾವಾರು ಅವೆರ್‌ನೆಸ್ ಪ್ರೋಗ್ರಾಂ
4. ಅಧ್ಯಾಪಕರಿಗೆ ಸಿಬಿಸಿಎಸ್ ಟ್ರೈನಿಂಗ್ ಪ್ರೋಗ್ರಾಂ
5. ಹೊಸದಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಸಿಬಿಸಿಎಸ್ ಟ್ರೈನಿಂಗ್ ಪ್ರೋಗ್ರಾಂ(ಪ್ರತಿ ವರ್ಷ)
6. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ
7. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ಸಪೋರ್ಟಿಂಗ್ ಪ್ರೋಗ್ರಾಂ
8. ಸಂಶೋಧನೆಯ ಗುಣಮಟ್ಟ ಕಾಯ್ದುಕೊಳ್ಳುವ ದೃಷ್ಟಿಯಿಂದ ಮಾರ್ಗದರ್ಶಕರಿಗೆ ಕಮ್ಮಟಗಳು

ಮೇಲಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಭೆ ಅನುಮೋದನೆ ನೀಡಿತು.

**ವಿಷಯ: 5. ವಿಭಾಗಗಳಿಂದ ಮಾಹಿತಿ ನೀಡುವಲ್ಲಿ ಆಗುವ ವಿಳಂಬದ ಬಗೆಗೆ.**

**ನಿರ್ಣಯ:** ಫೀಡ್‌ಬ್ಯಾಕ್‌ಗೆ ಸಂಬಂಧಿಸಿದಂತೆ 7 ಪ್ರೊಗ್ರಾಂಗಳ ಹಳೆಯ ವಿದ್ಯಾರ್ಥಿಗಳ ಮಾಹಿತಿಗಳನ್ನು ಕೇಳಲಾಗಿತ್ತು. 3 ಪೂರ್ಣ, ಒಂದು ಅಪೂರ್ಣ ಮಾಹಿತಿಯಷ್ಟೇ ಬಂದಿರುತ್ತದೆ. ಇದನ್ನು ಸಭೆಯ ಗಮನಕ್ಕೆ ತಂದಾಗ ತಕ್ಷಣವೇ ಇನ್ನೊಂದು ನೆನಪಿನೋಲೆ ಕಳುಹಿಸಲು ಅಧ್ಯಕ್ಷರು ಸೂಚಿಸಿದರು.

ಮಾಹಿತಿಗಳನ್ನು ವಿಭಾಗಗಳು ನೀಡಲು ವಿಳಂಬ ಮಾಡಿದಲ್ಲಿ ಆಡಳಿತಾತ್ಮಕವಾಗಿ ಸೂಕ್ತ ಕ್ರಮವಹಿಸಬೇಕೆಂಬ ಸದಸ್ಯರ ಸೂಚನೆಯನ್ನು ಅಧ್ಯಕ್ಷರು ಅನುಮೋದಿಸಿ ಈ ಬಗೆಗೆ ಕ್ರಮವಹಿಸಬಹುದೆಂದು ನಿರ್ಧರಿಸಲಾಯಿತು.

ಸದಸ್ಯ ಸಂಚಾಲಕರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು **ಸದಸ್ಯ ಸಂಚಾಲಕರು**

**ಅಧ್ಯಕ್ಷರು**

**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ಆಂತರಿಕ ಗುಣಮಟ್ಟ ಭರವಸೆ ಕೋಶ**
**ವಿದ್ಯಾರಣ್ಯ 583 276, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ದೂರವಾಣಿ: 08394–241335**

---

**ಕವಿಹಂ:ಐಕ್ಯುಎಸಿ:ಪಮಂಸ:03:2020–21** **ದಿನಾಂಕ: 01.10.2020**

## ಐಕ್ಯುಎಸಿ ಪದಾಧಿಕಾರಿಗಳ ಮಂಡಳಿ ಸಭೆಯ ನಡಾವಳಿಗಳು

ದಿನಾಂಕ 30.09.2020ರಂದು ಕ್ರಿಯಾಶಕ್ತಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಐಕ್ಯುಎಸಿ ಪದಾಧಿಕಾರಿಗಳ ಮಂಡಳಿ ಸಭೆ(2)ಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:**

| | | |
|---|---|---|
| 1. ಡಾ. ಸ.ಚಿ. ರಮೇಶ, ಮಾನ್ಯ ಕುಲಪತಿಗಳು, ಕವಿಹಂ. | : | ಅಧ್ಯಕ್ಷರು |
| 2. ಡಾ. ಎ.ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ. | : | ಸದಸ್ಯರು |
| 3. ಡಾ. ರಹಮತ್ ತರೀಕೆರೆ, ಪ್ರಾಧ್ಯಾಪಕರು, ಕವಿಹಂ. | : | ಸದಸ್ಯರು |
| 4. ಡಾ. ಯರ್ರಿಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಕವಿಹಂ. | : | ಸದಸ್ಯರು |
| 5. ಶ್ರೀ ರಾಘವೇಂದ್ರ ಕುಪ್ಪೆಲೂರು, ಸಂಶೋಧನಾ ವಿದ್ಯಾರ್ಥಿ | : | ಸದಸ್ಯರು |
| 6. ಡಾ. ಎ.ಮೋಹನ ಕುಂಟಾರ್, ನಿರ್ದೇಶಕರು, ಐಕ್ಯುಎಸಿ | : | ಸದಸ್ಯರು |
| 7. ಶ್ರೀಮತಿ ಡಿ. ಪ್ರಭಾ, ಸಹಾಯಕ ನಿರ್ದೇಶಕರು | : | ಸದಸ್ಯ ಸಂಚಾಲಕರು |

**ಸಭೆಯಲ್ಲಿ ಗೈರು ಹಾಜರಾದವರು:**

| | | |
|---|---|---|
| 1. ಡಾ. ಟಿ.ಪಿ. ವಿಜಯ್, ಪ್ರಾಧ್ಯಾಪಕರು, ಕವಿಹಂ. | : | ಸದಸ್ಯರು |
| 2. ಡಾ. ಮೋಹನಕೃಷ್ಣ ರೈ, ಪ್ರಾಧ್ಯಾಪಕರು, ಕವಿಹಂ. | : | ಸದಸ್ಯರು |
| 3. ಡಾ. ಎ. ವೆಂಕಟೇಶ, ಉಪಕುಲಸಚಿವರು, ಆಡಳಿತ, ಕವಿಹಂ. | : | ಸದಸ್ಯರು |
| 4. ಶ್ರೀ ಬಿ. ಗುರುಬಸಪ್ಪ, ಸಹಾಯಕ ಕುಲಸಚಿವರು(ನಿ), ಕವಿಹಂ. | : | ಸದಸ್ಯರು |
| 5. ಡಾ. ಬಸವರಾಜ, ಸಹಾಯಕ ಪ್ರಾಧ್ಯಾಪಕರು<br>ಸರ್ಕಾರಿ ಪ್ರ.ದ.ಕಾಲೇಜು, ಹೊಸಪೇಟೆ | : | ಸದಸ್ಯರು |

ಹೊಸ ಅಧಿಸೂಚನೆಯೊಂದಿಗೆ ಆರಂಭವಾದ ಮಂಡಳಿಯ ಹೊಸ ಸದಸ್ಯರನ್ನು ಅಧ್ಯಕ್ಷರು ಮೊದಲಿಗೆ ಸ್ವಾಗತಿಸಿದರು. ನಂತರ ಮಂಡಳಿಯ ಸಭೆಗೆ ಸದಸ್ಯರನ್ನು ಸ್ವಾಗತಿಸುವ ಮೂಲಕ ಐ.ಕ್ಯು.ಎ.ಸಿ. ನಿರ್ದೇಶಕರು ಸಭೆಯನ್ನು ಆರಂಭಿಸಿದರು.

**ವಿಷಯ: 1. Evaluative Reports/AQAR ಬಗೆಗೆ.**

**ನಿರ್ಣಯ:** 2019–20ನೇ ಸಾಲಿನ Evaluative Reports ಮತ್ತು AQAR ನಮೂನೆಗಳಿಗೆ ಮಾಹಿತಿಗಳನ್ನು ಎಲ್ಲ ಅಧ್ಯಯನ ಮತ್ತು ಆಡಳಿತ ವಿಭಾಗಗಳು ದಿನಾಂಕ 31.08.2020ರ ಒಳಗೆ ಐಕ್ಯುಎಸಿಗೆ ಸಲ್ಲಿಸಲು ಪತ್ರ ಕಳುಹಿಸಲಾಗಿತ್ತು. ಆದರೆ ಕೆಲವು ವಿಭಾಗಗಳು ಮಾತ್ರ ಮಾಹಿತಿ ಸಲ್ಲಿಸಿರುವ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಸಭೆಯು ನವಂಬರ್ 02, 2020ರ ಒಳಗೆ ಕಡ್ಡಾಯವಾಗಿ ಮಾಹಿತಿಗಳನ್ನು ಸಲ್ಲಿಸುವಂತೆ ಸೂಚಿಸಿ, ನೆನಪಿನೋಲೆಯನ್ನು ಕಳುಹಿಸಲು ತೀರ್ಮಾನಿಸಿತು.

**ವಿಷಯ: 2. Criteriawise Awareness Programme ಬಗೆಗೆ.**

**ನಿರ್ಣಯ:** Evaluative Reports ಮತ್ತು AQAR ನಮೂನೆಗಳಿಗೆ ಮಾಹಿತಿಗಳನ್ನು ಕೊಡುವವರಿಗೂ ಮತ್ತು ತೆಗೆದುಕೊಳ್ಳುವವರಿಗೂ ತರಬೇತಿಯ ಅವಶ್ಯಕತೆ ಇರುವುದನ್ನು ಹಾಗೂ ಇದರಿಂದ ಮುಂದಿನ ದಿನಗಳಲ್ಲಿ ನ್ಯಾಕ್‌ಗೆ ಸಲ್ಲಿಸುವ ವರದಿಗಳು ಹೆಚ್ಚು ಪರಿಣಾಮಕಾರಿಯಾಗಿ ಇರಬಲ್ಲದು ಎಂಬ ಬಗ್ಗೆ ಸುದೀರ್ಘವಾಗಿ ಸಭೆಯು ಚರ್ಚಿಸಿತು.

ನಂತರ ಒಂಬತ್ತು ಅಥವಾ ಹತ್ತು ಅಧ್ಯಾಪಕರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ, ಇವರಿಗೆ ಕ್ರೈಟೇರಿಯಾವಾರು ಕಾರ್ಯಗಳನ್ನು ಹಂಚಿಕೆ ಮಾಡುವುದು ಹಾಗೂ ತಜ್ಞರ ಮೂಲಕ ಕ್ರೈಟೇರಿಯಾಗಳ ಬಗೆಗೆ ತಿಳುವಳಿಕೆ ನೀಡಬೇಕೆಂದು ಸಭೆ ತೀರ್ಮಾನಿಸಿತು.

**ವಿಷಯ: 3. Peer Team ಶಿಫಾರಸ್ಸುಗಳ ಬಗೆಗೆ.**

**ನಿರ್ಣಯಗಳು:** ಪೀರ್ ಟೀಮ್ ಶಿಫಾರಸ್ಸುಗಳನ್ನು ಪರಿಶೀಲಿಸಿದ ಸಭೆಯು ಹಂತ ಹಂತವಾಗಿ ಜಾರಿಗೆ ತರಲು ಅಭಿಪ್ರಾಯಿಸಿದ ಹಿನ್ನೆಲೆಯಲ್ಲಿ ಆದ್ಯತೆಯ ಮೇರೆಗೆ ಕಾರ್ಯರೂಪಕ್ಕೆ ತರಲು ಸಂಬಂಧಪಟ್ಟ ವಿಭಾಗಗಳ ಮೂಲಕ ಆಡಳಿತಾತ್ಮಕ ಕ್ರಮವಹಿಸಲು ನಿರ್ಧರಿಸಿತು.

ಅ. ಪಠ್ಯಕ್ರಮಗಳು ಪರಿಷ್ಕರಣೆ ಮಾಡುವುದು.

ಆ. ಪ್ರೋಗ್ರಾಂ ಮತ್ತು ಕೋರ್ಸ್ ಕೋಡ್‌ಗಳು ಎಲ್ಲ ಹಂತಗಳಲ್ಲಿ ಕ್ರಮವಾಗಿ ಬಳಕೆ ಮಾಡುವುದು.

ಇ. ಸಿಬಿಸಿಎಸ್ ರೆಗ್ಯುಲೇಷನ್ಸ್ ಸಿದ್ಧಪಡಿಸುವುದು ಮತ್ತು ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರಿಗೆ ತರಬೇತಿ ನೀಡುವುದು.

ಈ. ವಿಶ್ವವಿದ್ಯಾಲಯದ ಸಾಂಸ್ಥಿಕ, ವೈಯಕ್ತಿಕ ಯೋಜನೆಗಳನ್ನು ಯುಜಿಸಿ ಪರಿಭಾಷೆಗಳಲ್ಲಿ ಮೇಜರ್, ಮೈನರ್ ಪ್ರೊಜೆಕ್ಟ್‌ಗಳೆಂದು ಎಲ್ಲ ಹಂತಗಳಲ್ಲೂ ಬಳಸುವಂತೆ ಕ್ರಮವಹಿಸುವುದು.

ಉ. ಸ್ಟುಡೆಂಟ್ಸ್ ಕೌನ್ಸಿಲ್ ರಚಿಸುವುದು.

ಊ. ವಿಶ್ವವಿದ್ಯಾಲಯದ ಪ್ರಕಟಣೆಗಳಲ್ಲಿ ವಿಭಾಗದ ಹೆಸರನ್ನು ಸ್ಪಷ್ಟವಾಗಿ ಮುದ್ರಿಸುವುದು.

**ವಿಷಯ: 4. ಅಧ್ಯಕ್ಷರ ಅಪ್ಪಣೆಯ ಮೇರೆಗೆ**

**1**. ಆಟೊಮೆಷನ್, ಡಿಜಿಟಲೈಜೇಷನ್, ವೆಬ್‌ಸೈಟ್ ಇವುಗಳನ್ನು ವಿಶ್ವವಿದ್ಯಾಲಯದಲ್ಲಿ ಕಾರ್ಯರೂಪಕ್ಕೆ ತರುವ ಬಗೆಗೆ.

**ನಿರ್ಣಯ:** ವಾರ್ಷಿಕ ಎಕ್ಯುಎಆರ್ ನ್ಯಾಕ್‌ಗೆ ಆಯಾ ವರ್ಷವೇ ಸಲ್ಲಿಸುವುದು ಕಡ್ಡಾಯವಾಗಿದ್ದು, ಅದು ಮುಂದೆ ನ್ಯಾಕ್ ಗ್ರೇಡ್‌ಗೂ ಪರಿಗಣಿಸಲಾಗುವುದರಿಂದ ವಿಶ್ವವಿದ್ಯಾಲಯವು ಈಗಿನಿಂದಲೇ ಕಾರ್ಯಪ್ರವೃತ್ತವಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ನ್ಯಾಕ್ ಸಂದರ್ಭದಲ್ಲಿ ಕೆಲಸಗಳ ನಿರ್ವಹಣೆಯನ್ನು ಸುಸೂತ್ರಗೊಳಿಸಲು ಆಗಬೇಕಾದ ತುರ್ತು ಕೆಲಸಗಳು ಎಂದು ಪರಿಗಣಿಸಿ ಆಡಳಿತವು ಬಾಹ್ಯ ತಜ್ಞರ ನೆರವಿನ ಮೂಲಕ ತಕ್ಷಣದಲ್ಲಿ ಆಟೊಮೆಷನ್, ಡಿಜಿಟಲೈಜೇಷನ್ ಮತ್ತು ವೆಬ್‌ಸೈಟ್‌ಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆ ನಿರ್ಣಯಿಸಿತು.

**2**. ಬಾಹ್ಯ ತಜ್ಞರೊಬ್ಬರನ್ನು ಕರೆಸುವ ಬಗೆಗೆ.

**ನಿರ್ಣಯ:** ವಿಶ್ವವಿದ್ಯಾಲಯದ ಎಲ್ಲ ಅಧ್ಯಾಪಕರುಗಳಿಗೆ ಹಾಗೂ ಆಡಳಿತ ಸಿಬ್ಬಂದಿಗಳಿಗೆ ನ್ಯಾಕ್ ಹಿನ್ನೆಲೆಯಲ್ಲಿ ಕ್ರೈಟೇರಿಯಾವಾರು ತಿಳುವಳಿಕೆ ನೀಡಲು ಬಾಹ್ಯ ತಜ್ಞರೊಬ್ಬರ ಅವಶ್ಯಕತೆ ಇರುವುದನ್ನು ಮನಗಂಡ ಸಭೆಯು ಬಾಹ್ಯ ತಜ್ಞರೊಬ್ಬರನ್ನು ಕರೆಸಲು ನಿರ್ಧರಿಸಿತು.

**3**. ವಿದ್ಯಾರ್ಥಿಗಳಿಗೆ ಇನ್ಸುರೆನ್ಸ್ ಮಾಡಿಸುವ ಬಗೆಗೆ.

**ನಿರ್ಣಯ:** ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಆರೋಗ್ಯ ವಿಮೆಯನ್ನು ಮಾಡಿಸಲು ಸಭೆಯು ತೀರ್ಮಾನಿಸಿತು. ಆರೋಗ್ಯ ವಿಮೆಯನ್ನು ಸಿಬ್ಬಂದಿಗಳಿಗೂ ವಿಸ್ತರಿಸಲು ಮತ್ತು ಸಂಬಂಧಿಸಿದ ಆಡಳಿತ ಶಾಖೆಯಿಂದ ಈ ಯೋಜನೆ ಕಾರ್ಯರೂಪಕ್ಕೆ ತರಲು ಸಭೆ ತೀರ್ಮಾನಿಸಿತು.

ಸದಸ್ಯ ಸಂಚಾಲಕರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

**ಸದಸ್ಯ ಸಂಚಾಲಕರು**

**ಅಧ್ಯಕ್ಷರು**


**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ಆಂತರಿಕ ಗುಣಮಟ್ಟ ಭರವಸೆ ಕೋಶ**

**ವಿದ್ಯಾರಣ್ಯ 583 276, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ದೂರವಾಣಿ: 08394–241335**


**ಕವಿಹಂ:ಐಕ್ಯುಎಸಿ:ಪಮಂಸ:04:2020–21** **ದಿನಾಂಕ: 29.12.2020**

## ಐಕ್ಯುಎಸಿ ಪದಾಧಿಕಾರಿಗಳ ಮಂಡಳಿ ಸಭೆಯ ನಡಾವಳಿಗಳು

ದಿನಾಂಕ: 29.12.2020ರಂದು ಕ್ರಿಯಾಶಕ್ತಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಐಕ್ಯುಎಸಿ ಪದಾಧಿಕಾರಿಗಳ ಮಂಡಳಿ ಸಭೆ(3)ಯ ನಡಾವಳಿಗಳು:

**ಸಭೆಯಲ್ಲಿ ಹಾಜರಿದ್ದವರು**

1. ಡಾ. ಸ.ಚಿ. ರಮೇಶ, ಮಾನ್ಯ ಕುಲಪತಿಗಳು, ಕವಿಹಂ. : ಅಧ್ಯಕ್ಷರು
2. ಡಾ. ಎ.ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ. : ಸದಸ್ಯರು
3. ಡಾ. ರಹಮತ್ ತರೀಕೆರೆ, ಪ್ರಾಧ್ಯಾಪಕರು : ಸದಸ್ಯರು
4. ಡಾ. ಟಿ.ಪಿ. ವಿಜಯ್, ಪ್ರಾಧ್ಯಾಪಕರು : ಸದಸ್ಯರು
5. ಡಾ. ಕೆ. ಮೋಹನ್‌ಕೃಷ್ಣ ರೈ, ಪ್ರಾಧ್ಯಾಪಕರು : ಸದಸ್ಯರು
6. ಡಾ. ಯರ‍್ರಿಸ್ವಾಮಿ ಈ., ಸಹಾಯಕ ಪ್ರಾಧ್ಯಾಪಕರು : ಸದಸ್ಯರು
7. ಶ್ರೀ ರಾಘವೇಂದ್ರ ಕುಪ್ಪೆಲೂರು, ಸಂಶೋಧನಾ ವಿದ್ಯಾರ್ಥಿ : ಸದಸ್ಯರು
8. ಡಾ. ಎ.ಮೋಹನ ಕುಂಟಾರ್, ನಿರ್ದೇಶಕರು, ಐಕ್ಯುಎಸಿ : ಸದಸ್ಯರು
9. ಶ್ರೀಮತಿ ಡಿ. ಪ್ರಭಾ, ಸಹಾಯಕ ನಿರ್ದೇಶಕರು : ಸದಸ್ಯ ಸಂಚಾಲಕರು

**ಗೈರು ಹಾಜರಾದವರು**

1. ಡಾ. ಎ.ವೆಂಕಟೇಶ, ಉಪಕುಲಸಚಿವರು, ಆಡಳಿತ : ಸದಸ್ಯರು
2. ಶ್ರೀ ಬಿ. ಗುರುಬಸಪ್ಪ, ಸಹಾಯಕ ಕುಲಸಚಿವರು, ನಿರ್ವಹಣೆ : ಸದಸ್ಯರು
3. ಡಾ. ಬಸವರಾಜ, ಸಹಾಯಕ ಪ್ರಾಧ್ಯಾಪಕರು : ಸದಸ್ಯರು
   ಸರ್ಕಾರಿ ಪ್ರ.ದ.ಕಾಲೇಜು, ಹೊಸಪೇಟೆ

ಐ.ಕ್ಯು.ಎ.ಸಿ. ನಿರ್ದೇಶಕರ ಸ್ವಾಗತದೊಂದಿಗೆ ಸಭೆಯು ಆರಂಭವಾಯಿತು.

**ವಿಷಯ: 1. 2019–20ನೇ ಸಾಲಿನ ಎಕ್ಯುಎಆರ್‌ಗೆ ಸಂಬಂಧಿಸಿದಂತೆ ಅಧ್ಯಯನ ವಿಭಾಗಗಳಿಂದ 2019–20ನೇ ಸಾಲಿನ ಮೌಲ್ಯಮಾಪನ ವರದಿ ಮತ್ತು ಆಡಳಿತ ವಿಭಾಗಗಳಿಂದ ಆಯಾ ವಿಭಾಗಗಳಿಗೆ ಸಂಬಂಧಿಸಿದಂತೆ ಎಕ್ಯುಎಆರ್ ನಮೂನೆಗಳನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಐಕ್ಯುಎಸಿ ಕಚೇರಿಗೆ ಸಲ್ಲಿಸುವಂತೆ ಸುತ್ತೋಲೆ (ದಿನಾಂಕ**

**23.07.2020) ಹಾಗೂ ನೆನಪೋಲೆ 1 ಮತ್ತು 2(ಕ್ರಮವಾಗಿ ದಿನಾಂಕ 06.10.2020 ಮತ್ತು 03.11.2020)ಗಳನ್ನು ಕಳುಹಿಸಿದ್ದಾಗ್ಯೂ ಕೆಲವು ವಿಭಾಗಗಳಿಂದ ಮಾಹಿತಿಗಳು ಬಾರದಿರುವ ಬಗೆಗೆ.**

**ನಿರ್ಣಯ:** ಮಾಹಿತಿ ಸಲ್ಲಿಸದೇ ಇರುವ ವಿಭಾಗಗಳ ಸದಸ್ಯರು ಮುಖ್ಯಸ್ಥರೊಡನೆ ಕುಲಪತಿಗಳ ಅಧ್ಯಕ್ಷತೆಯಲ್ಲಿರುವ ಸಮಿತಿ ಸದಸ್ಯರ ಸಮ್ಮುಖದಲ್ಲಿ ಬಂದು ಮಾಹಿತಿಯನ್ನು ನೇರವಾಗಿ ನೀಡುವಂತೆ ಆಡಳಿತಾಂಗವು ಪತ್ರ ಹೊರಡಿಸಲು ಹಾಗೂ ಸ್ಪಂದಿಸದ ವಿಭಾಗಗಳ ಬಗೆಗೆ ಆಡಳಿತಾತ್ಮಕವಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆ ಶಿಫಾರಸ್ಸು ಮಾಡಿತು.

**ವಿಷಯ: 2. ಇಂಗ್ಲಿಷ್ ಸ್ಪೀಕಿಂಗ್, ಟ್ರಾನ್ಸ್‌ಲೇಷನ್ ಇತ್ಯಾದಿಗಳ ಬಗೆಗೆ ವಿದ್ಯಾರ್ಥಿಗಳಿಗೆ ತರಬೇತಿ.**

**ನಿರ್ಣಯ:** ಐಕ್ಯುಎಸಿಯು ನಡೆಸುವ ಕ್ವಾಲಿಟಿ ಇನಿಷಿಯೇಟಿವ್ ಪ್ರೋಗ್ರಾಮ್ಸ್‌ಗಳ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಸ್ಪೀಕಿಂಗ್, ಟ್ರಾನ್ಸ್‌ಲೇಷನ್ ಇತ್ಯಾದಿಗಳ ಬಗೆಗೆ ತರಬೇತಿ ನೀಡಲು ಸಭೆ ಶಿಫಾರಸ್ಸು ಮಾಡಿತು.

**ವಿಷಯ: 3. ಆಡಳಿತ ಸಿಬ್ಬಂದಿಗಳಿಗೆ ತರಬೇತಿ.**

**ನಿರ್ಣಯ:** ಆಡಳಿತಾಂಗದ ಸಹಯೋಗದೊಂದಿಗೆ ಸಮೂಹವಾರು(ಎ, ಬಿ, ಸಿ, ಡಿ) ಸಿಬ್ಬಂದಿಗಳಿಗೆ ಪ್ರತ್ಯೇಕವಾಗಿ ಆಡಳಿತ ತರಬೇತಿಯನ್ನು ನೀಡಲು ಸಮಿತಿಯು ಶಿಫಾರಸ್ಸು ಮಾಡಿತು.

**ವಿಷಯ: 4. ದಿನಾಂಕ 30.9.2020ರಂದು ನಡೆದ ಪದಾಧಿಕಾರಿ ಮಂಡಳಿ ಸಭೆಯಲ್ಲಿ ತಜ್ಞರ ನೆರವು ಪಡೆಯಲು ನಿರ್ಣಯಿಸಿದ್ದು ಅದನ್ನು ಕಾರ್ಯರೂಪಕ್ಕೆ ತರುವ ಬಗೆಗೆ.**

**ನಿರ್ಣಯ:** ವಾರ್ಷಿಕ ಗುಣಮಟ್ಟ ಭರವಸೆ ವರದಿ(ಎಕ್ಯುಎಆರ್) ಹಾಗೂ ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತಿಗೆ(ನ್ಯಾಕ್) ವರದಿಗಳನ್ನು ಸಿದ್ಧಪಡಿಸಲು ನುರಿತ ಬಾಹ್ಯ ತಜ್ಞರೊಬ್ಬರನ್ನು ನೇಮಿಸಿಕೊಳ್ಳಲು ಸಮಿತಿಯು ಶಿಫಾರಸ್ಸು ಮಾಡಿತು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**ವಿಷಯ: 1. ಕನ್ನಡ ವಿಶ್ವವಿದ್ಯಾಲಯದ ಜಾಲತಾಣ (ವೆಬ್‌ಸೈಟ್) ಬಗೆಗೆ.**

**ನಿರ್ಣಯ:** ವಿಶ್ವವಿದ್ಯಾಲಯವನ್ನು ಪ್ರಸ್ತುತ ಸ್ಪರ್ಧಾತ್ಮಕ ಕಾಲಘಟ್ಟಕ್ಕೆ ತಕ್ಕಂತೆ ಆಧುನೀಕರಿಸಲು ಮತ್ತು ನ್ಯಾಕ್ ಕ್ರೈಟೇರಿಯಾಗಳ ಅಗತ್ಯಗಳನ್ನು ಪೂರೈಸಲು ಈಗಿರುವ ಜಾಲತಾಣ ವ್ಯವಸ್ಥೆಯ ಕುರಿತು ಚರ್ಚಿಸಿದ ಸಭೆಯು ಕನ್ನಡ ವಿಶ್ವವಿದ್ಯಾಲಯದ ಜಾಲತಾಣ(ವೆಬ್‌ಸೈಟ್)ವನ್ನು outsourceನ ನೆರವು ಪಡೆದು ವಿನ್ಯಾಸಗೊಳಿಸಿ ಇನ್ನಷ್ಟು ನವೀಕರಿಸಲು (update) ಅನುಕೂಲವಾಗುವಂತೆ ಜಾಲತಾಣದ ನಿರ್ವಹಣೆಗೆ ವ್ಯವಸ್ಥೆ ಮಾಡುವಂತೆ ಸಮಿತಿಯು ಶಿಫಾರಸ್ಸು ಮಾಡಿತು.

**ವಿಷಯ: 2. ವಿಶ್ವವಿದ್ಯಾಲಯದ ಅಧ್ಯಾಪಕರ ಮತ್ತು ಆಡಳಿತ ಸಿಬ್ಬಂದಿಗಳಿಗೆ ಪ್ರತ್ಯೇಕ ಇ–ಮೇಲ್ ಐಡಿಗಳನ್ನು ಒದಗಿಸುವ ಬಗೆಗೆ.**

**ನಿರ್ಣಯ:** ಕನ್ನಡ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಬೋಧಕ ಮತ್ತು ಆಡಳಿತ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದ ವತಿಯಿಂದಲೇ ಇ–ಮೇಲ್ ಐಡಿಗಳನ್ನು ರೂಪಿಸಲು ಸಭೆ ಶಿಫಾರಸ್ಸು ಮಾಡಿತು. ಸದರಿ ಇ–ಮೇಲ್ ಐಡಿಗಳನ್ನು ಬಳಸಿಯೇ ಕಚೇರಿಯ ಎಲ್ಲಾ ಕೆಲಸ ಕಾರ್ಯಗಳನ್ನು ನಡೆಸಲು ಸಮಿತಿ ಸಲಹೆ ನೀಡಿತು.

**ವಿಷಯ: 3. 3ನೇ ಆವೃತ್ತಿಯ ನ್ಯಾಕ್ ಮಾನ್ಯತೆಯ ಸಂದರ್ಭದಲ್ಲಿ ಪೀರ್ ಟೀಮ್‌ದೊಂದಿಗೆ ನಡೆದ ಸಭೆ(ದಿ.3.12.2019) ಯಲ್ಲಿ ಚರ್ಚಿಸಿದ ವಿಷಯಗಳ ಹಿನ್ನೆಲೆಯಲ್ಲಿ ಐಕ್ಯುಎಸಿಯು ದಿನಾಂಕ 10.1.2020ರಂದು ನಡೆಸಿದ ಪದಾಧಿಕಾರಿಗಳ ಮಂಡಳಿ ಸಭೆಯ ನಿರ್ಣಯದಂತೆ ಸಿದ್ಧಪಡಿಸಿ ದಿನಾಂಕ 22.1.2020ರಂದು ಆಡಳಿತಾಂಗಕ್ಕೆ ಸಲ್ಲಿಸಿರುವ ವರದಿಗಳ ಬಗೆಗೆ.**

**ನಿರ್ಣಯ:** ವರದಿಗಳಲ್ಲಿರುವಂತೆ Scopus, Bibilomatrics, E-Journals, ಶೋಧಗಂಗಾ ಇತ್ಯಾದಿಗಳನ್ನು ತುರ್ತಾಗಿ ಕಾರ್ಯರೂಪಕ್ಕೆ ತರಲು ಬೇಕಾದ ಎಲ್ಲ ವ್ಯವಸ್ಥೆಗಳನ್ನು ಆಡಳಿತಾಂಗವು ನಿರ್ವಹಿಸುತ್ತದೆಂದು ಅಧ್ಯಕ್ಷರು ತಿಳಿಸಿದರು. ಇದನ್ನು ಶೀಘ್ರವಾಗಿ ಕಾರ್ಯರೂಪಕ್ಕೆ ತರುವುದು ಅಗತ್ಯ ಎಂದು ಸಭೆ ಅಭಿಪ್ರಾಯಪಟ್ಟಿತು.

**ವಿಷಯ: 4. ಇಂಟರ್‌ನಲ್ AAA ಕುರಿತು.**

**ನಿರ್ಣಯ:** ವಿಶ್ವವಿದ್ಯಾಲಯದಲ್ಲಿ ಇಂಟರ್‌ನಲ್ ಅಕಾಡೆಮಿಕ್ ಅಂಡ್ ಅಡ್ಮಿನಿಸ್ಟ್ರೇಟಿವ್ ಆಡಿಟ್ ನಡೆಸಲು ಸಭೆ ಶಿಫಾರಸ್ಸು ಮಾಡಿತು.

**ವಿಷಯ: 5. ನ್ಯಾಕ್ ನಿಯಮಾನುಸಾರ ಶೈಕ್ಷಣಿಕ ವರ್ಷವು ಜುಲೈದಿಂದ ಜೂನ್‌ವರೆಗೆ ಇರುತ್ತದೆ. ಆದರೆ ಪ್ರಸ್ತುತ ಶೈಕ್ಷಣಿಕ ವರ್ಷವನ್ನು ನಿಗದಿಪಡಿಸುವಲ್ಲಿ ಕೋವಿಡ್ ಕಾರಣದಿಂದ ಆಯಾ ಸಂಸ್ಥೆಗಳೇ ಶೈಕ್ಷಣಿಕ ವರ್ಷವನ್ನು ನಿಗದಿಪಡಿಸಿಕೊಳ್ಳಲು ನ್ಯಾಕ್ ಅವಕಾಶ ಕಲ್ಪಿಸಿದೆ. ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯ 2019–20ರ ಶೈಕ್ಷಣಿಕ ವರ್ಷವನ್ನು ನಿಗದಿಪಡಿಸುವ ಬಗೆಗೆ.**

**ನಿರ್ಣಯ:** ಈಗಾಗಲೇ ಚಾಲ್ತಿಯಲ್ಲಿರುವ ಏಪ್ರಿಲ್‌ದಿಂದ ಮಾರ್ಚನ್ನೇ ಶೈಕ್ಷಣಿಕ ವರ್ಷವೆಂದು ಪರಿಗಣಿಸಿ AQAR ಸಿದ್ಧಪಡಿಸಿ ಸಲ್ಲಿಸಲು ಸಮಿತಿ ನಿರ್ಣಯಿಸಿತು.

ಸದಸ್ಯ ಸಂಚಾಲಕರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

**ಅಧ್ಯಕ್ಷರು** **ಸದಸ್ಯ ಸಂಚಾಲಕರು**

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ಆಂತರಿಕ ಗುಣಮಟ್ಟ ಭರವಸೆ ಕೋಶ**

**ವಿದ್ಯಾರಣ್ಯ 583 276, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ದೂರವಾಣಿ: 08394–241335**

ಕವಿಹಂ:ಐಕ್ಯೂಎಸಿ:ಪ.ಮಂ.ಸ4:2020–21 ದಿನಾಂಕ: 30.03.2021

**ದಿನಾಂಕ: 29.03.2021ರಂದು ಮಧ್ಯಾಹ್ನ 3.00 ಗಂಟೆಗೆ ಕ್ರಿಯಾಶಕ್ತಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಐಕ್ಯುಎಸಿ ಪದಾಧಿಕಾರಿಗಳ ಮಂಡಳಿ ಸಭೆ(4)ಯ ನಡಾವಳಿಗಳು.**

**ಸಭೆಯಲ್ಲಿ ಹಾಜರಿದ್ದವರು**

| | | | |
|---|---|---|---|
| 1. | ಮಾನ್ಯ ಕುಲಪತಿಗಳು, ಕವಿಹಂ. | : | ಅಧ್ಯಕ್ಷರು |
| 2. | ಕುಲಸಚಿವರು, ಕವಿಹಂ. | : | ಸದಸ್ಯರು |
| 3. | ಡಾ. ರಹಮತ್ ತರೀಕೆರೆ, ಪ್ರಾಧ್ಯಾಪಕರು | : | ಸದಸ್ಯರು |
| 4. | ಡಾ. ಟಿ.ಪಿ. ವಿಜಯ್, ಪ್ರಾಧ್ಯಾಪಕರು | : | ಸದಸ್ಯರು |
| 5. | ಡಾ. ಯರ್ರಿಸ್ವಾಮಿ ಈ, ಸಹಾಯಕ ಪ್ರಾಧ್ಯಾಪಕರು | : | ಸದಸ್ಯರು |
| 6. | ಉಪಕುಲಸಚಿವರು, ಆಡಳಿತ | : | ಸದಸ್ಯರು |
| 7. | ಸಹಾಯಕ ಕುಲಸಚಿವರು, ನಿರ್ವಹಣೆ | : | ಸದಸ್ಯರು |
| 8. | ಡಾ. ಬಸವರಾಜ, ಸಹಾಯಕ ಪ್ರಾಧ್ಯಾಪಕರು<br>ಸರ್ಕಾರಿ ಪ್ರ.ದ.ಕಾಲೇಜು, ಹೊಸಪೇಟೆ | : | ಸದಸ್ಯರು |
| 9. | ಶ್ರೀ ರಾಘವೇಂದ್ರ ಕುಪ್ಪೇಲೂರ, ಸಂಶೋಧನಾ ವಿದ್ಯಾರ್ಥಿ | : | ಸದಸ್ಯರು |

10. ಡಾ. ಮೋಹನ ಕುಂಟಾರ್, ನಿರ್ದೇಶಕರು, ಐಕ್ಯುಎಸಿ : ಪದನಿಮಿತ್ತ ಸದಸ್ಯರು
11. ಶ್ರೀಮತಿ ಡಿ. ಪ್ರಭಾ, ಸಹಾಯಕ ನಿರ್ದೇಶಕರು, ಐಕ್ಯುಎಸಿ : ಸದಸ್ಯ ಸಂಚಾಲಕರು

**ಸಭೆಯಲ್ಲಿ ಗೈರು ಹಾಜರಾದವರು**

1. ಡಾ. ಕೆ. ಮೋಹನಕೃಷ್ಣ ರೈ, ಪ್ರಾಧ್ಯಾಪಕರು : ಸದಸ್ಯರು

ಐ.ಕ್ಯು.ಎ.ಸಿ. ನಿರ್ದೇಶಕರು ಸ್ವಾಗತಿಸಿ ಸಭೆಯನ್ನು ಆರಂಭಿಸಿದರು.

**ನಡಾವಳಿಗಳು:**

**ವಿಷಯ–1 : ಐಕ್ಯುಎಸಿಯು ಸಿದ್ಧಪಡಿಸಿರುವ 2019–20ನೇ ಸಾಲಿನ AQAR ನ್ನು ನ್ಯಾಕ್‌ಗೆ ಸಲ್ಲಿಸಲು ಅನುಮೋದನೆಗಾಗಿ ಮಂಡಿಸಿದೆ. ವರದಿ (AQAR)ಯನ್ನು ಪೂರ್ಣಗೊಳಿಸಲು ಇನ್ನು ಕೆಲವೊಂದು ಮಾಹಿತಿಗಳ ಕೊರತೆ ಇರುವುದನ್ನು IQAC ನಿರ್ದೇಶಕರು ಸಭೆಯ ಗಮನಕ್ಕೆ ತಂದರು.**

**ನಿರ್ಣಯ–1 :** 2019–20ನೇ ಸಾಲಿನ AQAR ನ್ನು ನ್ಯಾಕ್‌ಗೆ ಸಲ್ಲಿಸಲು ದಿನಾಂಕ: 08.03.2021 ರಂದು ನಡೆಯಲಿರುವ ಕಾರ್ಯಕಾರಿ ಸಮಿತಿಯ ಅನುಮೋದನೆ ಪಡೆಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ದಿನಾಂಕ: 30.03.2021 ರಿಂದ IQAC ಕಚೇರಿಗೆ ಬಂದು Evaluative Report ಗಳನ್ನು ಆಧರಿಸಿ ಮ್ಯಾಟ್ರಿಕ್ಸ್‌ಗಳನ್ನು ದಿನಾಂಕ: 05.03.2021ರೊಳಗೆ ಪೂರ್ಣಗೊಳಿಸಲು ಕ್ರೈಟೇರಿಯಾವಾರು ಸದಸ್ಯರಿಗೆ ಸೂಚಿಸಲಾಯಿತು. ಇದುವರೆಗೆ ಮಾಹಿತಿ ಸಲ್ಲಿಸದೇ ಇರುವ ಅಧಿಕಾರಿಗಳನ್ನು ಸಭೆಗೆ ಕರೆಯಿಸಿ ಮಾಹಿತಿ ತಕ್ಷಣವೇ ನೀಡುವಂತೆಯೂ ಸೂಚಿಸಲಾಯಿತು.

**ವಿಷಯ–2 : 2020–21ನೇ ಸಾಲಿನ AQAR ಗೆ ಮಾಹಿತಿ ಮತ್ತು Evaluative Report ಗಳನ್ನು ಪಡೆದುಕೊಳ್ಳುವ ಬಗೆಗೆ.**

**ನಿರ್ಣಯ–2 :** 2020–21 ನೇ ಸಾಲಿನ AQAR ಗೆ ಮಾಹಿತಿ ಮತ್ತು ಅಧ್ಯಯನ ವಿಭಾಗಗಳಿಂದ Evaluative Report ಗಳನ್ನು 2021ರ ಜೂನ್ 30ರ ಒಳಗೆ ತರಿಸಿಕೊಳ್ಳುವಂತೆ ಸಭೆ ನಿರ್ಧರಿಸಿತು.

**ವಿಷಯ–3 : ವಿಶ್ವವಿದ್ಯಾಲಯದ ಅಧ್ಯಾಪಕರು, ಆಡಳಿತ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳಿಗೆ ಗುಣಮಟ್ಟ ಹೆಚ್ಚಿಸುವಂತಹ ತರಬೇತಿ ಕಾರ್ಯಾಗಾರಗಳನ್ನು ನಡೆಸುವ ಬಗೆಗೆ.**

**ನಿರ್ಣಯ–3 :** ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ಆಡಳಿತ ಅಧಿಕಾರಿಗಳಿಗೆ NAAC ಗೆ ಸಂಬಂಧಿಸಿದಂತೆ ಪ್ರತಿಯೊಂದು ಕ್ರೈಟೇರಿಯಾಗಳ ಬಗೆಗೆ ತರಬೇತಿ ಕಾರ್ಯಗಾರ ಆಯೋಜಿಸಬೇಕೆಂದು ಸಭೆ ನಿರ್ಣಯಿಸಿತು. ಈ ಕಾರ್ಯಾಗಾರಕ್ಕೆ ನ್ಯಾಕ್ ಕಚೇರಿಯ ಸಲಹೆಗಾರರು ಅಥವಾ ಬಾಹ್ಯ ಸಂಪನ್ಮೂಲ ವಿದ್ವಾಂಸರನ್ನು ಕರೆಸಬಹುದೆಂದು ಸಭೆ ಅಭಿಪ್ರಾಯಪಟ್ಟಿತು.

ಪ್ರಸ್ತುತ ತರಬೇತಿಯನ್ನು IQAC ಯಿಂದ ಏಪ್ರಿಲ್ ಕೊನೆಯ ವಾರದಲ್ಲಿ ಹಮ್ಮಿಕೊಂಡು, 2019–20ರ AQAR ನ್ನು ಪೂರ್ಣಪ್ರಮಾಣದಲ್ಲಿ ದಾಖಲೆಗಳ ಸಹಿತ ಅಂತಿಮಗೊಳಿಸುವುದಲ್ಲದೆ ಮುಂದಿನ 2020–21ನೇ ಸಾಲಿನ AQAR ನ ಹೊಸ ನಮೂನೆಗೆ ಸೂಕ್ತ ಮಾರ್ಗದರ್ಶನ ಪಡೆಯುವುದೆಂದು ನಿರ್ಧರಿಸಲಾಯಿತು. ಹಾಗೆಯೇ ಆಡಳಿತ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಿಗೆ ಕಾರ್ಯಗಾರವನ್ನು ಹಮ್ಮಿಕೊಳ್ಳಲು ಸಭೆ ನಿರ್ಣಯಿಸಿತು.

**ವಿಷಯ–4 : ವಿಶ್ವವಿದ್ಯಾಲಯದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಪಠ್ಯಕ್ರಮ ಪರಿಷ್ಕರಿಸುವ ಬಗೆಗೆ ಉಪಕುಲಸಚಿವರು (ಶೈಕ್ಷಣಿಕ) ಇವರಿಗೆ IQAC ನಿರ್ದೇಶಕರು ದಿನಾಂಕ: 01.02.2020 ರಂದು ನೀಡಿದ ಪತ್ರವನ್ನು (2020–21ರ ಶೈಕ್ಷಣಿಕ ವರ್ಷದಿಂದ ಪರಿಷ್ಕೃತ ಪಠ್ಯಕ್ರಮ ಅನ್ವಯವಾಗುವಂತೆ) ಹಾಗು ದಿನಾಂಕ: 20.02.2021ರಂದು ಕಳುಹಿಸಿದ ಕಡತ (2021–22 ನೇ ಶೈಕ್ಷಣಿಕ ವರ್ಷದಿಂದ ಪರಿಷ್ಕೃತ ಪಠ್ಯಕ್ರಮಗಳಿಗೆ ಚಾಲನೆ ನೀಡುವ ಹಿನ್ನೆಲೆಯಲ್ಲಿ) ಸಭೆಯ ಗಮನಕ್ಕೆ ತರಲಾಯಿತು.**

**ನಿರ್ಣಯ–4 :** ಪರಿಶೀಲಿಸಿದ ಸಭೆಯು ಆದಷ್ಟು ಶೀಘ್ರ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಉಪಕುಲಸಚಿವರು (ಶೈಕ್ಷಣಿಕ) ಇವರಿಗೆ ಸೂಚಿಸಲು ನಿರ್ಧರಿಸಿತು.

**5. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.**

**ವಿಷಯ–5.1 : ವಿಶ್ವವಿದ್ಯಾಲಯದ ವಿವಿಧ ನೀತಿ (Policy)ಗಳಿಗೆ ದಾಖಲೆಗಳನ್ನು ರೂಪಿಸುವಂತೆ ಪರಿಷ್ಕರಿಸಿ/ಸೃಜಿಸುವ ಬಗೆಗೆ.**

**ನಿರ್ಣಯ–5.1 :** ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲು ಸಂಬಂಧಿಸಿದ ಸಂಚಾಲಕರುಗಳಿಗೆ ಆಡಳಿತಾಂಗ ಸೂಚಿಸಲು ಸಭೆ ನಿರ್ಧರಿಸಿತು.

1. Plagiarism Policy
2. Research Policy
3. Ph.D Policy
4. Intellectual Property Rights Policy
5. Prevention of Sexual Harassment at workplace Policy
6. Anti Ragging Policy
7. CBCS Policy

**ವಿಷಯ–5.2 : ವಿಶ್ವವಿದ್ಯಾಲಯದ ಪ್ರಕಟಣೆಗಳಿಗೆ ಸಂಬಂಧಿಸಿದಂತೆ ನ್ಯಾಕ್‌ನ ಅವಶ್ಯಕತೆಗಾಗಿ ಯುಜಿಸಿ ಕೇರ್‌ಲೀಸ್ಟ್‌ನಲ್ಲಿ ನೋಂದಣಿ ಪಡೆದುಕೊಳ್ಳುವಂತೆ ಕಾರ್ಯನಿರ್ವಹಿಸುವ ಬಗೆಗೆ.**

**ನಿರ್ಣಯ–5.2 :** ಈ ಸಂಬಂಧ ಆಡಳಿತಾಂಗದಿಂದ ಈ ಕೆಳಕಂಡವರನ್ನೊಳಗೊಂಡಂತೆ ಸಮಿತಿ ರಚನೆಗೆ ಸಭೆ ಶಿಫಾರಸು ಮಾಡಿತು.

ಡಾ. ಟಿ.ಪಿ. ವಿಜಯ್, ಪ್ರಾಧ್ಯಾಪಕರು
ಡಾ. ಕೆ. ಮೋಹನಕೃಷ್ಣ ರೈ, ಪ್ರಾಧ್ಯಾಪಕರು
ಡಾ. ಹೆಚ್.ಡಿ. ಪ್ರಶಾಂತ್, ನಿರ್ದೇಶಕರು, ಪ್ರಸಾರಾಂಗ
ಡಾ. ಎಸ್.ವೈ. ಸೋಮಶೇಖರ್, ಉಪಕುಲಸಚಿವರು (ಶೈಕ್ಷಣಿಕ)
ಡಾ. ಎರ್ರಿಸ್ವಾಮಿ. ಈ, ಸಹಾಯಕ ಪ್ರಾಧ್ಯಾಪಕರು
ಶ್ರೀ ಸುಹಾಸ್, ಗ್ರಂಥಪಾಲಕರು

**ವಿಷಯ–5.3 : ಈ ಹಿಂದೆ ನಡೆದ ಪದಾಧಿಕಾರಿ ಮಂಡಳಿ ಸಭೆಯಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ಆಡಳಿತ ಸಿಬ್ಬಂದಿಗಳಿಗೆ ಪ್ರತ್ಯೇಕ ಇ–ಮೇಲ್ ಐಡಿಗಳನ್ನು ರೂಪಿಸಿ ಒದಗಿಸಲು ಸಮಿತಿ ಸಲಹೆ ನೀಡಿರುವ ಬಗೆಗೆ.**

**ನಿರ್ಣಯ–5.3 :** ಈ ವಿಷಯವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾಲಯದ ವೆಬ್‌ಸೈಟ್ Update ಆದ ಮೇಲೆ ಈ ಕಾರ್ಯ ನಿರ್ವಹಿಸಬಹುದೆಂದು ಅಭಿಪ್ರಾಯಪಟ್ಟಿತು.

ಸದಸ್ಯ ಸಂಚಾಲಕರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಅಧ್ಯಕ್ಷರು** **ಸದಸ್ಯ ಸಂಚಾಲಕರು**

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ಆಂತರಿಕ ಗುಣಮಟ್ಟ ಭರವಸೆ ಕೋಶ**

**ವಿದ್ಯಾರಣ್ಯ 583 276, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ದೂರವಾಣಿ: 08394–241335**

ಸಂಖ್ಯೆ:ಕವಿಹಂ/ಐಕ್ಯುಎಸಿ/ಕ3/2021–22 ದಿನಾಂಕ: 28.06.2021

**ನಡಾವಳಿಗಳು**

ದಿನಾಂಕ: 25.06.2021ರಂದು ಮಧ್ಯಾಹ್ನ: 12.30 ಗಂಟೆಗೆ Online ಮೂಲಕ ನಡೆದ ಐಕ್ಯುಎಸಿ ಪದಾಧಿಕಾರಿಗಳ ಮಂಡಳಿ ಸಭೆ(1)ಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು**

1. ಡಾ. ಸ.ಚಿ. ರಮೇಶ, ಮಾನ್ಯ ಕುಲಪತಿಗಳು, ಕವಿಹಂ : ಅಧ್ಯಕ್ಷರು
2. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ : ಸದಸ್ಯರು
3. ಡಾ. ರಹಮತ್ ತರೀಕೆರೆ, ಪ್ರಾಧ್ಯಾಪಕರು, ಕವಿಹಂ : ಸದಸ್ಯರು
4. ಡಾ. ವಿಜಯ್ ಪೂಣಚ್ಚ ತಂಬಂಡ, ಪ್ರಾಧ್ಯಾಪಕರು, ಕವಿಹಂ : ಸದಸ್ಯರು
5. ಡಾ. ಕೆ. ಮೋಹನಕೃಷ್ಣ ರೈ, ಪ್ರಾಧ್ಯಾಪಕರು, ಕವಿಹಂ : ಸದಸ್ಯರು
6. ಡಾ. ಯರ್ರಿಸ್ವಾಮಿ. ಈ, ಸಹಾಯಕ ಪ್ರಾಧ್ಯಾಪಕರು, ಕವಿಹಂ : ಸದಸ್ಯರು
7. ಡಾ. ಎ. ವೆಂಕಟೇಶ, ಉಪಕುಲಸಚಿವರು, ಆಡಳಿತ, ಕವಿಹಂ : ಸದಸ್ಯರು
8. ಶ್ರೀ ಬಿ. ಗುರುಬಸಪ್ಪ, ಸಹಾಯಕ ಕುಲಸಚಿವರು, ನಿರ್ವಹಣೆ, ಕವಿಹಂ : ಸದಸ್ಯರು
9. ಡಾ. ಬಸವರಾಜ ಟಿ.ಹೆಚ್, ಸಹಾಯಕ ಪ್ರಾಧ್ಯಾಪಕರು, ಹಳೇಯ ವಿದ್ಯಾರ್ಥಿ ಸರ್ಕಾರಿ ಪ್ರ.ದ.ಕಾಲೇಜು, ಹೊಸಪೇಟೆ : ಸದಸ್ಯರು
10. ಶ್ರೀ ರಾಘವೇಂದ್ರ ಕುಪ್ಪೇಲೂರ, ಸಂಶೋಧನಾ ವಿದ್ಯಾರ್ಥಿ, ದ್ರಾವಿಡ ಸಂ.ಅ.ವಿಭಾಗ, ಕವಿಹಂ. : ಸದಸ್ಯರು
11. ಡಾ. ಎ. ಮೋಹನ ಕುಂಟಾರ್, ನಿರ್ದೇಶಕರು, ಐಕ್ಯುಎಸಿ, ಕವಿಹಂ : ಸದಸ್ಯರು
12. ಶ್ರೀಮತಿ ಡಿ. ಪ್ರಭಾ, ಸಹಾಯಕ ನಿರ್ದೇಶಕರು, ಐಕ್ಯುಎಸಿ, ಕವಿಹಂ : ಸದಸ್ಯ ಸಂಚಾಲಕರು

ಐ.ಕ್ಯು.ಎ.ಸಿ. ನಿರ್ದೇಶಕರು ಸ್ವಾಗತಿಸಿ ಸಭೆಯನ್ನು ಆರಂಭಿಸಿದರು.

**ವಿಷಯ–1 :** ದಿನಾಂಕ: 29.03.2021ರಂದು ನಡೆದ ಐಕ್ಯುಎಸಿ ಪದಾಧಿಕಾರಿಗಳ ಮಂಡಳಿ ಸಭೆಯ ನಡಾವಳಿಗಳ ಸ್ಥಿರೀಕರಣ.

**ನಿರ್ಣಯ–1:** 2019–20ನೇ ಸಾಲಿನ ಎಕ್ಯುಎಆರ್ ಅನ್ನು ದಿನಾಂಕ: 26.05.2021 ರಂದು ನ್ಯಾಕ್‌ಗೆ ಸಲ್ಲಿಸಲಾಗಿದೆ. ಉಳಿದಂತೆ ಆಡಳಿತಾಂಗವು ನಿರ್ವಹಿಸಬೇಕಾದ ನಡಾವಳಿಗಳಲ್ಲಿನ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚಿಸಿದ ಸಭೆಯು ಆಡಳಿತಾಂಗವು ಶೀಘ್ರ ಕ್ರಮವಹಿಸಬೇಕೆಂದು ನಿರ್ಣಯಿಸಿ, ಸ್ಥಿರೀಕರಿಸಲಾಯಿತು.

**ವಿಷಯ–2 :** 2020–21ನೇ ಸಾಲಿನ Students Satisfaction Survey (SSS) ಪ್ರಶ್ನಾವಳಿಗಳಿಗೆ ಅನುಮೋದನೆ.

**ನಿರ್ಣಯ–2:** ಪ್ರಶ್ನಾವಳಿಗಳನ್ನು ಪರಿಶೀಲಿಸಿದ ಸಭೆಯು ಅನುಮೋದನೆ ನೀಡಿತು.

**ವಿಷಯ–3 :** 2020–21ನೇ ಸಾಲಿನ AQAR ಸಿದ್ಧತೆ ಬಗೆಗೆ.

**ನಿರ್ಣಯ–3:** 2020–21ನೇ ಸಾಲಿನ ಎಕ್ಯುಎಆರ್ ಸಿದ್ಧತೆಯ ಸ್ವರೂಪದ ಬಗೆಗೆ ಐಕ್ಯುಎಸಿ ನಿರ್ದೇಶಕರು ವಿವರವಾಗಿ ಸಭೆಯಲ್ಲಿ ಮಂಡಿಸಿದರು. ಸುದೀರ್ಘ ಚರ್ಚೆಯ ಬಳಿಕ ಮಾನ್ಯ ಅಧ್ಯಕ್ಷರ ಸೂಚನೆಯಂತೆ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.

3.1 ಕ್ರೈಟೇರಿಯಾವಾರು ಏಳು ಜನ ಸಂಚಾಲಕರುಗಳು ಅವರವರಿಗೆ ನಿಗದಿಪಡಿಸಿದ ಕ್ರೈಟೇರಿಯಾಗಳ ಪೂರ್ಣ ಜವಾಬ್ದಾರಿಯನ್ನು ನಿರ್ವಹಿಸುವುದು. ಅಗತ್ಯ ಮಾಹಿತಿಗಳನ್ನು ಸಂಬಂಧಪಟ್ಟ ವಿಭಾಗ ಮತ್ತು ಕಚೇರಿಗಳಿಂದ ಸ್ವತಃ ಪಡೆದು ಪೂರ್ಣಗೊಳಿಸಿದ ವರದಿಯನ್ನು ಪರಿಶೀಲನೆ ಬಳಿಕ 2021ರ ಸೆಪ್ಟಂಬರ್ 30ರ ಒಳಗಾಗಿ ಐಕ್ಯುಎಸಿಗೆ ಸಲ್ಲಿಸುವುದು.

3.2 ಆಯಾ ಸಂಚಾಲಕರು ಸಿದ್ಧಪಡಿಸಿದ ವರದಿಯ ಪರಿಶೀಲನೆ ಹಾಗೂ ಸಲಹೆ ಸೂಚನೆಗಳಿಗಾಗಿ ಐಕ್ಯುಎಸಿ ಪದಾಧಿಕಾರಿ ಮಂಡಳಿ ಸದಸ್ಯರನ್ನು ಖುದ್ದಾಗಿ ಭೇಟಿ ಮಾಡಬಹುದು.

3.3 ಕ್ರೈಟೇರಿಯಾವಾರು ಸಂಚಾಲಕರುಗಳು NAAC 4th Cycle ಗೆ ಸಂಬಂಧಿಸಿದಂತೆ AQAR ನ ಪೂರ್ಣ ಜವಾಬ್ದಾರಿಯನ್ನು ನಿರ್ವಹಿಸುವುದು. ಅಗತ್ಯವೆನಿಸಿದರೆ ಆಯಾ ಸಂಚಾಲಕರುಗಳೇ ಇನ್ನೊಬ್ಬರನ್ನು ಸದಸ್ಯರಾಗಿ (ಐಕ್ಯುಎಸಿ ಪದಾಧಿಕಾರಿ ಮಂಡಳಿ ಸದಸ್ಯರನ್ನು ಹೊರತುಪಡಿಸಿ) ಆಯ್ಕೆ ಮಾಡಿಕೊಂಡು ಆಡಳಿತದ ಗಮನಕ್ಕೆ ತಂದಲ್ಲಿ ಆದೇಶ ನೀಡಲಾಗುವುದು.

3.4 ಕ್ರೈಟೇರಿಯಾವಾರು ಸಂಚಾಲಕರು ಮಾಹಿತಿಗಳನ್ನು ಸಂಬಂಧಿಸಿದ ವಿಭಾಗಗಳಿಂದ ಪಡೆದು ಕಂಪ್ಯೂಟರಿಗೆ ಅಳವಡಿಸಿ, ದಾಖಲೆಗಳ ಸಹಿತ ಐಕ್ಯುಎಸಿಗೆ ಸಲ್ಲಿಸುವುದು. (ಕಂಪ್ಯೂಟರ್ ಅಳವಡಿಕೆಗೆ ಐಕ್ಯುಎಸಿ ಕಚೇರಿ ನೆರವು ಪಡೆಯಬಹುದು).

3.5 ಆಯಾ ಸಂಚಾಲಕರುಗಳು ಆಯಾ ವರ್ಷದ ಎಕ್ಯುಎಆರ್‌ನ್ನು ನ್ಯಾಕ್‌ಗೆ ಅಪ್‌ಲೋಡ್ ಮಾಡುವ ಸಂದರ್ಭದಲ್ಲಿ ಕೇಳುವ ಕ್ಲಾರಿಫಿಕೇಷನ್‌ಗಳಿಗೆ ಸಮರ್ಪಕವಾದ ಪ್ರತಿಕ್ರಿಯೆಗಳನ್ನು ದಾಖಲೆ ಸಹಿತ ಕೊಡಲು ಜವಾಬ್ದಾರರಾಗಿರುತ್ತಾರೆ.

3.6 ಕ್ರೈಟೇರಿಯಾದ ಸಂಚಾಲಕರು ತಮ್ಮ ತಮ್ಮ ಕ್ರೈಟೇರಿಯಾದ ಮೆಟ್ರಿಕ್ಸ್‌ಗಳನ್ನು ಪೂರ್ಣಗೊಳಿಸುವ ಪ್ರಯತ್ನದ ಸಲುವಾಗಿ ವಿಭಾಗಗಳು ಹಾಗೂ ಆಡಳಿತಾಂಗ ಮಾಡಬೇಕಾದ ಕೆಲಸ ಕಾರ್ಯಗಳ ಬಗೆಗೆ ಲಿಖಿತವಾಗಿ ಮಾಹಿತಿ ನೀಡಬಹುದು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

**ವಿಷಯ–4 :** ವಿಭಾಗಗಳು Evaluative Report ನ ಹಾರ್ಡ್ ಮತ್ತು ಸಾಫ್ಟ್ ಕಾಪಿಗಳನ್ನು IQACಗೆ ನಿಗದಿತ ಸಮಯದಲ್ಲಿ ಸಲ್ಲಿಸುವ ಬಗೆಗೆ.

**ನಿರ್ಣಯ–4:** ಅಧ್ಯಯನ/ಆಡಳಿತ ವಿಭಾಗಗಳು Evaluative Report/AQAR ನ ವರದಿ/ಮಾಹಿತಿಯ ಹಾರ್ಡ್ ಮತ್ತು ಸಾಫ್ಟ್ ಕಾಪಿಗಳನ್ನು IQACಗೆ ಪ್ರತಿವರ್ಷ ನಿಗದಿತ ಸಮಯದಲ್ಲಿ ಸಲ್ಲಿಸದೇ ಇರುವುದರ ಬಗ್ಗೆ ಚರ್ಚಿಸಿದ ಸಭೆಯು ಇಂತಹ ಸಂದರ್ಭದಲ್ಲಿ 2020–21ರ AQAR ಗೆ ಸಂಬಂಧಿಸಿರುವ ಸುತ್ತೋಲೆ ಬಳಿಕ ಎರಡು ನೆನಪೋಲೆಗಳನ್ನು ಮಾತ್ರ IQAC ಯಿಂದ ಕಳುಹಿಸಲು ನಿರ್ಧರಿಸಲಾಯಿತು. ಈ ನೆನಪೋಲೆಗಳ ನಂತರವೂ ವರದಿ/ಮಾಹಿತಿಗಳು ಬಾರದಿದ್ದಲ್ಲಿ ಸೂಕ್ತ ಪ್ರಾಧಿಕಾರದ ಗಮನಕ್ಕೆ ತರಲು ನಿರ್ಣಯಿಸಲಾಯಿತು.

ಸದಸ್ಯ ಸಂಚಾಲಕರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಅಧ್ಯಕ್ಷರು** **ಸದಸ್ಯ ಸಂಚಾಲಕರು**